ಕಡಗೋಲು ತಿಂತ್ಯು ಉಡದಾರ

ಹೀಗೆ ಮುರಿದು ಕಟ್ಟುವ ಉದಾಹರಣೆಗಳು ಹಲವು ಸಿಗುತ್ತವೆ.

ಬೇಂದ್ರೆ ಕಾವ್ಯ ಅಂದರೆ ಸಿನಿಮಾ ರಂಗದವರಿಗೆ, ಪಟ್ಟಣಗಳಲ್ಲಿ ಸಂಗೀತ ಸಂಜೆ ಏರ್ಪಡಿಸುವವರಿಗೆ ಮತ್ತು ಟೀವಿ ವಾಹಿನಿಗಳಲ್ಲಿ ಹಾಡಿನ ಸ್ಪರ್ಧೆ ಏರ್ಪಡಿಸುವವರಿಗೆ ಮೆಚ್ಚು. ಯಾಕೆಂದರೆ ಅವು ಹಾಡುಗವಿತೆಗಳು. ಮತ್ತು ಈ ಕಾರಣಕ್ಕೆ ಅವರ ಕಾವ್ಯ ಇತರೆ ಕವಿಗಳಿಗೆ ಹೋಲಿಸಿದರೆ ಜನಪ್ರಿಯ. ಆದರೆ ಅವುಗಳ ಅಭ್ಯಾಸಕ್ಕೆ ಬಂದಾಗ ಕಠಿಣ. ಮೇಲ್ನೋಟಕ್ಕೆ ಸುಲಭವಾಗಿ ಅರ್ಥವಾಗಿಬಿಡಬಲ್ಲ ಕವಿತೆಗಳಂತೆ ಕಂಡರೂ, ಅಲ್ಲಿ ಬಳಸಲಾದ ಪ್ರತಿಮೆ, ರೂಪಕ ಮತ್ತು ಧ್ವನಿಯನ್ನು ಹಿಂಜಿ ವಿವರಿಸುವುದಕ್ಕೆ ತಯಾರಿ ಬೇಕಾಗುತ್ತದೆ. ಹಾಗಾಗಿ ಇಂದಿನ ಬಹುತೇಕ ಯುವ ಕವಿಗಳಿಗೆ ಬೇಂದ್ರೆ ಹಾಗೆ ಬರೆಯುವುದೆಂದರೆ ತಮ್ಮ ಕವಿತೆಗಳಲ್ಲಿ ಧಾರವಾಡದ ಅಥವಾ ಉತ್ತರ ಕರ್ನಾಟಕದ ನುಡಿಗಟ್ಟು ಬಳಕೆ ಮಾಡುವುದು ಎಂಬ ಸರಳೀಕರಣವಾಗಿದೆ. ಯಾವಾಗ ಅವರ ರಚನೆಗಳ ಪ್ರೇರಣೆ ಮತ್ತು ಮೂಲದ್ರವ್ಯದ ಜಾಡು ಸಿಗುವುದಿಲ್ಲವೋ ಆಗ ಅವರಿಂದ ವಿಮುಖರಾಗಬೇಕಾದ ಅನಿವಾರ್ಯತೆ ಬರುತ್ತದೆ. ನಮ್ಮ ಸಮಕಾಲೀನ ಅನೇಕ ಕವಿಗಳು ಇಂದಿನ ತುರ್ತಿಗೆ ತಕ್ಷಣ ಸ್ಪಂದಿಸಲು ಅವಲಂಬಿಸುವುದು ಪರಂಪರೆಯನ್ನಲ್ಲ. ಅದು ಯವಾಗಲು ಆಗಬೇಕಾದ ಅಗತ್ಯವೂ ಇಲ್ಲ. ಆದರೆ ಏಕತಾನತೆಯಿಂದ ಬಿಡಿಸಿಕೊಳ್ಳಬೇಕೆಂದಲ್ಲಿ ನಾವೆಲ್ಲ ಮಾಡಬೇಕಿರುವುದು ಹಲವು ಸ್ಥಳ ಪುರಾಣಗಳ ಜ್ಞಾನ ಮೂಲಗಳಲ್ಲಿ ದೊರೆಯಬಹುದಾದ ಪ್ರತಿಮೆಗಳನ್ನು ಕಾವ್ಯದಲ್ಲಿ ತರುವುದು. ಒಂದು ಭಿನ್ನ ಆಧುನಿಕೋತ್ತರ ಕಾಲಘಟ್ಟದ ಸಮಾಜೋರಾಜಕೀಯ ವ್ಯವಸ್ಥೆಯಲ್ಲಿ ಬದುಕುವವರು ಇದನ್ನು ಹೇಗೆ ಸಾಧಿಸುವುದು? ಸಾಧನಕೇರಿ ಅದೆಲ್ಲಿ ಸಿಕ್ಕೀತು ಈ ದಿನಗಳಲ್ಲಿ? ಕಾವ್ಯ ಧೇನಿಸಿ ಕೂಡಬಹುದೇ ಮಲೆಯ ಮಧ್ಯದೊಳಗೆ? ಇಲ್ಲವೆಂದೆ ಹೇಳಬೇಕು. ಬದುಕು ಛಿದ್ರಗೊಂಡ ಇಂದಿನ ಎಫ್.ಎಂ ರೇಡಿಯೊ, ಫಾಸ್ಟ್ ಫುಡ್ ಸಂಜೆಗಳಲ್ಲಿ ಕಾಜಾಣಗಳೆಲ್ಲಿ ಕಂಡಾವು? ಇದಕ್ಕೆ ಇರುವ ಎರಡು ಮಾರ್ಗಗಳೆಂದರೆ ಒಂದು ಜನ ಸಮೂಹದೊಂದಿಗೆ ಸಾಧಿಸಬೇಕಾದ ಒಡನಾಟ ಮತ್ತು ಪುನಃ ಜನಚರಿತ್ರೆಗಳನ್ನು ಓದಬೇಕಾದ ಅಗತ್ಯ. ಬಹುಶಃ ಹೀಗೆ ಮಾಡಿದರೆ ಒಂದಷ್ಟು ತಾಜಾ ಕವಿತೆಗಳು ಹುಟ್ಟಬಹುದೇನೊ.

ಈ ವಿಷಯವಾಗಿ ಕವಿ ಆರಿಫ್ ರಾಜಾ, 'ಬೇಂದ್ರೆ ಕಾವ್ಯ ಜನಪದ ಮಟ್ಟುಗಳನ್ನು ಬಳಸಿಕೊಂಡ ಕಾರಣ ಜನಪದ ಕಾವ್ಯದಂತೆ ಕಂಡರೂ, ಅವರೊಬ್ಬ ಆಧುನಿಕ ಅಸ್ತಿತ್ವವಾದಿ ಕವಿಯಾಗಿದ್ದರು. ಪ್ರಕೃತಿ ಮತ್ತು ಹೆಣ್ಣಿನ ಒಳಗೆ ನಡೆಯುವ ಹೊಯ್ದಾಟಗಳನ್ನು ಮತ್ತೆ ಮತ್ತೆ ಕಾವ್ಯದಲ್ಲಿ ತಂದಿದ್ದಾರೆ. ಬೇಂದ್ರೆ ಒಬ್ಬ ಎಚ್ಚೆತ್ತ ಮನಸಿನ ಕನವರಿಸುವ ಕವಿ. ಅವರದು ಕನಸಿನ ಭಾಷೆ. ಕಂಬಾರರ ಬರಹದಲ್ಲಿ ಈ ತರಹದ ಸೀಳಿಕೊಳ್ಳುವ ಪ್ರಕ್ರಿಯೆ ನಡೆಯುತ್ತದೆ. ಹಾಗಾಗಿ ಬೇಂದ್ರೆ ಕಾವ್ಯಕ್ಕೆ ನಮ್ಮ ಹೊಸ ತಲೆಮಾರು ಇನ್ನು ಪ್ರವೇಶವನ್ನೇ ಪಡೆದಿಲ್ಲ' ಎನ್ನುತ್ತಾರೆ.

ಧಾರವಾಡದೊಂದಿಗಿನ ಒಂದು ದಶಕದ ನನ್ನ ಒಡನಾಟ ಹಲವು ಬಗೆಯಲ್ಲಿ ನನ್ನ ಕವಿತೆಗೆ ಸಹಕಾರಿಯಾಗಿದೆ. ಬೇಂದ್ರೆಯವರು ಓಡಾಡಿದ ಆ ಜಾಗೆಗಳನ್ನು ಭಾವುಕವಾಗಿ ನೋಡುವ ಮತ್ತು ಅವರ ಕಾವ್ಯದ ಮೂಲಕ ಸಾಧನಕೇರಿಯನ್ನು ಗ್ರಹಿಸುವ ವಿಫಲ ಯತ್ನಗಳ ಫಲವಾಗಿಯೋ ಏನೊ ನಾನು ನನ್ನದೇ ಬಂಡಿದಾರಿ ಹಿಡಿದು ನಡೆದಿದ್ದೇನೆ. ಇದು ಹೊಸದಲ್ಲ. ಹಿರಿಯಾರು ತುಳಿಯಲಾರದ್ದು ಅಲ್ಲ. ಆದರೆ, ಆಶ್ಚರ್ಯವೆಂಬಂತೆ ಅವರಾಗಲೇ ಬರೆದಿಟ್ಟ ಸಾಲುಗಳ ಪ್ರಭಾವ ನನ್ನ ಹಲವು ರಚನೆಗಳಲ್ಲಿ ಆಗಿದೆ. ಉದಾಹರಣೆಗೆ. ನನ್ನ ಹಾಡುಗವಿತೆಗಳ ಸಂಕಲನ 'ಜುಲುಮೆ'ಯಲ್ಲಿ ಸೇರಿಸಲಾದ ಕಾಗಿ ಕುಣಿದ್ವಾಂಗ ಮಾಗಿ ತಣಿದ್ವಾಂಗ (ಕಾಗಿ ಕುಣಿದ್ವಾಂಗ ಮಾಗಿ ತಣಿದ್ವಾಂಗ ಕೂಗಿ ಕರೆದ್ವಾಂಗ ಹಾಡ/ ನೆಲ ನೆರೆದ್ವಾಂಗ ಕೆರೆ ಬಿರಿದ್ವಾಂಗ ತೊರೆ ಹರಿದ್ವಾಂಗ ನೋಡ), ಸಂತೆ ಗದ್ದಲದೊಳಗ